ORIGINAL RESEARCH PAPER

Kannada

# ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸಣ್ಣಕತೆಗಳ ಬೆಳವಣಿಗೆ

KEY WORDS:

**Lohit .P**

Assistant Professor, Department of kannada, Akshara Institute of Management Studies, Shivamogga

ಲಲಿತಕಲೆಗಳ ಇನ್ನೊಂದು ಮುಖವೇ ಸಣ್ಣಕತೆಗಳು ಲಲಿತಕಲೆ ಯಾದರೋಸಾಹಿತ್ಯದಲ್ಲಿ ವಿಶೇಷಶಕ್ತಿಯುಳ್ಳದ್ದು ಬಹುಕಾಲಬಳುವಂಥದ್ದು, ಮಾನವನ ಜೀವನಕ್ಕೆ ಉಪಯುಕ್ತವಾದುದು ಲಲಿತಸಾಹಿತ್ಯವು ಭಾವಾತ್ಮಕವಾಗಿ ಹೃದಯಸ್ಪರ್ಶಿಯಾಗುವುದು ಇದು, ರಮಣೀಯವಾದುದು, ಆನಂದ ದಾಯಕವದುದು ಸತ್ಯವದುದು ಮತ್ತು ಸುಖಕರವಾದುದು. ಈ ಲಲಿತ ಸಾಹಿತ್ಯದಲ್ಲಿ ಕತೆ, ಕಾದಂಬರಿ, ನಾಟಕ, ಕವಿತೆ, ಪ್ರಬಂಧ, ಹರಟೆ ಮುಂತಾದ ರೂಪಕಗಳು ಬೆಳೆದುಬಂದಿದೆ. ಕಥೆಯ ಮುಖ್ಯ ಲಕ್ಷಣ ಮತ್ತು ಕಥನ ಕೌಶಲ ಭಾವಭಂಗವಾಗದಂತೆ ಪೂತರ್ಿಯಾಗಬೇಕು. ಸಂಪ್ರದಾಯ ಯಾವುದಾದರೂ ಆಗಬಹುದು.

ಸಣ್ಣಕತೆ ಕಾದಂಬರಿಯನ್ನು ಮೀರಿ ಜನಪ್ರಿಯವಾಗುತ್ತಿದೆ. ಕಾರಣವೇನೆಂದರೆ ಕೈಗಾರಿಕಾ ಕ್ರಾಂತಿಯ ನಂತರ ಸಮಯದ ಅಭಾವದ ಪರಿಣಾಮವಾಗಿ ದೀರ್ಘವಾದ ಮಹಾಕಾವ್ಯಗಳನ್ನು, ಕಾದಂಬರಿಗಳನ್ನು ಓದುವ ತಾಳ್ಮೆ ಕಡಿಮೆಯಾದ್ದರಿಂದ ಸಣ್ಣಕಥೆ ಜನಪ್ರಿಯವಾಗಿ ಈ ಪ್ರಕಾರದಲ್ಲಿ ಸಾಹಿತ್ಯ ರಚನೆಗೆ ಹೆಚ್ಚು ಪ್ರೋತ್ಸಾಹ ದೊರೆಯಿತು. ಎಡ್ಗ್ ಅಲನ್ ಪೋ ಹೇಳುವಂತೆ ಸಣ್ಣಕತೆ ಓದಿ ಮುಗಿಸಲು ಅರ್ದಗಂಟೆಯಿಂದ ಹಿಡಿದು ಒಂದು ಗಂಟೆ ಬೇಕಾಗುವ ಗದ್ಯ ಕಥನ, ಇನ್ನೊಂದು ಹೇಲಿಕೆಯಂತೆ ಒಂದೆ ಸಲಕ್ಕೆ ಓದಿ ಮುಗಿಸಬಹುದಾದ ಕತೆ ನಿಜವಾದ ಸಣ್ಣಕಥೆ. ಸಣ್ಣಕತೆ ಕಾದಂಬರಿಯಿಂದ ಬೇರ್ಪಟ್ಟ ಸಾಹಿತ್ಯ ಪ್ರಕಾರವಾಗಿದೆ. ಆಧುನಿಕ ಕನ್ನಡದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ- ಬಂಡಾಯದ ಮುಖ್ಯ ಅಭಿವ್ಯಕ್ತಿಯಾಗಿರುವ ಈ ಪ್ರಕಾರ ದಿನದಿನಕ್ಕೂ ಹೊಸ ರೂಪ ಮತ್ತು ತಂತ್ರಗಳ ಅನ್ವೇಷಣಾ ಭೂಮಿಕೆಯಾಗಿದೆ. ಸಣ್ಣಕತೆ ಮತ್ತು ಕಾದಂಬರಿಗಳು ಸ್ವರೂಪದಲ್ಲಿ , ಪರಿಣಾಮದಲ್ಲಿ ಹೇಗೆ ಬೇರೆಯಾಗುತ್ತವೆಂಬುದಕ್ಕೆ ಒಂದು ಹೇಳಿಕೆ. ಸಣ್ಣಕತೆ ಸಾವಿನ ಸಂದೇಶ ತಲುಪಿಸುವವನ ಹಾಗೆ, ಕಾದಂಬರಿ ಮೆರವಣಿಗೆ ಹೊರಟ ಹಾಗೆ ಎಂದಿದೆ. ಸಣ್ಣಕತೆಗೆ ಆಕಷರ್ಿತರಾಗದಿರುವವರೇ ಇಲ್ಲ. ಕತೆಯೆನ್ನುವುದು ಜನರಿಗೆ ಹೊಸದಲ್ಲ, ಮಾತನಾದುವುದಕ್ಕೆ ಆರಂಭಿಸಿ ದಂದಿನಿಂದ ಕತೆ ಹೇಳುವ ಪದ್ಧತಿಯು ಪ್ರಾರಂಭವಾಯಿತು. ವೇದ ಪುರಾಣಗಳಲ್ಲಿ ಕತೆಗಳಿದ್ದವು ಪುರಾಣವೆಂಬುದು ಕತೆಗಳ ಕಣಜ. ಸಾಹಿತ್ಯದಲ್ಲಿ ಕತೆಗೆ ಉತ್ತಮವಾದಸ್ಥಾನವಿದೆ ಹೇಗೆಂದರೆ ಭಾರತೀಯ ಸಂಸಾರದಲ್ಲಿ ಹತ್ತು ವರ್ಷದಿಂದ ಹದಿನಾರು ವರ್ಷದ ಕನ್ಯೆಯರಿಗೆ ಯಾವ ಸ್ಥಾನವಿದೆಯೋ ಅದೇ ಸ್ಥಾನ ಸಾಹಿತ್ಯದಲ್ಲಿ ಸಣ್ಣಕತೆಗಳಿಗೂ ಇದೆ ಸಣ್ಣಕ್ತೆಗಳು ಈ ಆಧುನಿಕ ಕಾಲದಲ್ಲಿ ಜನರಿಗೆ ಬಹಳ ಪ್ರಿಯವಾಗಿವೆ. ರಸಾನಂದವೇ ಲಲಿತಸಾಹಿತ್ಯದ ಪರಮಗುರಿ ಎಂದು ಸಾಹಿತ್ಯದ ಲಕ್ಷಣಕಾರರು ಹೇಳಿದ್ದಾರೆ ಕತೆಯಲ್ಲಿಯೂ ರಸಾನಂದವಾಗಬೇಕು ಕತೆಗೆ ತಾಯಿತಂದೆ ಕತೆಗಾರ. ಕತೆಯ ಶ್ರೇಷ್ಠತೆಯು ಕಥೆಗಾರನ ಶ್ರೇಷ್ಠತೆಯೇ ಆಗಿದೆ ಕತೆಗಾರನಿಗೆ ನೈಪುಣ್ಯವಿರಬೇಕು. ಕಥಾ ವಸ್ತುವಿನ ಆಯ್ಕೆಯಲ್ಲಿ ಕುಶಲತೆಯಿರಬೇಕು ಮಾತು ಕತೆಯಾಗಿ, ಕತೆಗಳಲ್ಲಿ ಸೇರಿಕೊಂಡಿತು. ಅನಂತರ ನಾನಾವಿಧವಾದ ಕತೆಗಳಾಗಿ ಪರಿಣಾಮ ಹೊಂದಿತು. ಕಿರಿದರಲ್ಲಿ ಹಿರಿದಾದ ಭಾವ, ಮತ್ತು ಅನುಭಗಳನ್ನು ತುಂಬಿ ಜೀವಕ್ಕೆ ಬೆಳಕು ಬೀರುವುದು ಸಣ್ಣಕ್ತೆಗಳ ವೈಶಿಷ್ಟವೆಂದು, ಶ್ರೀ ಯವರು ಹೇಳಿದ್ದಾರೆ. ಲಲಿತ, ಮಧುರ, ನಾಣ್ಣುಡಿ, ಜಾಣ್ಣುಡಿ ಮತ್ತು ಹಾಸ್ಯಪೂರಿತ ಬರವಣಿಗೆಯನ್ನೆ ಬಳಸುವುದು ಕಥಾಶೈಲಿಯ ಉತ್ತಮ ನಿದರ್ಶನಗಳು.

ಬುಧಸ್ವಾಮಿ ಕ್ಷೇಮೇಂದ್ರ, ಸೋಮದೇವ ಪ್ರಭಾಚಂದ್ರ, ಹರಿಷೇಣ, ಗುಣಾಢ್ಯ, ವಸುಭಾಗಭಟ್ಟ, ವಿಷ್ಣುಶರ್ಮ, ಮುಂತಾದವರು ಹಿಂದಿನ ಕಾಲದ ಗಣ್ಯಕಥೆಗಾರರಾಗಿದ್ದರು. ಇದರಿಂದ ಮುಂದುವರಿದ ಕಥಾಸೃಷ್ಟಿಯು ಹೊಸ ಕನ್ನಡದಲ್ಲಿ ಬಹಳವಾಗಿ ಹೆಚ್ಚಿ ಕನ್ನಡ ಸಾಹಿತ್ಯಕ್ಕೆ ಮೆರುಗನ್ನು ಕೊಟ್ಟಿದೆ. ಹೊಸಗನ್ನಡ ಕತೆಗಳ ಅಭಿವೃದ್ಧಿಯು ಜನಪದ ಸಾಹಿತ್ಯವನ್ನು ಬರವಣಿಗೆಯಲ್ಲಿ ಬರೆಯುವುದರಿಂದ ಸಂಸ್ಕೃತ ಪ್ರಾಕೃತಗಳ ಅನುವಾದಗಳಿಂದಲೂ, ಇಂಗ್ಲಿಷ್, ಬಂಗಾಳಿ, ಮರಾಠಿ ಮೊದಲಾದ ಅನ್ಯಭಾಷೆಗಳ ಕೃತಿ ಭಾಷಾಂತರಗಳಿಂದಲೂ ಮತ್ತು ಸ್ವತಂತ್ರತೆಯಿಂದಲೂ ಅಭಿವೃದ್ಧಿ ಹೊಂದಿದೆ.

ಜನಪದ ಸಾಹಿತ್ಯದ ಕತೆಗಳಲ್ಲಿ ಪಂಜೆ ಮಂಗೇಶರಾಯರು 'ಕೋಟಿಚೆನ್ನಿಯ' ಎಂಬ ಒಂದು ಕತೆಯೂ ಮಾಸ್ತಿಯವರ ಮತ್ತು ಬೆಟಗೇರಿ ಕೃಷ್ಣ ಶಮರ್ಾರ ಕೆಲವು ಕೃತಿಗಳಲ್ಲಿ ಜನಪದ ಕತೆಯು ಬಂದಿದೆ. ಬೃಹತ್ಕಥೆ, ಕಥಾಸರಿತ್ಸಾಗರ, ಪಂಚತಂತ್ರ, ಮುಂತಾದ ಕೃತಿಗಳ ಭಾಷಾಂತರವು ಹಳಗನ್ನಡ ಸಾಹಿತ್ಯದಿಂದಲೇ ನಡೆದುಬಂದಿದೆ. ಹೊಸಗನ್ನಡದಲ್ಲಿ ಎ. ಆರ್. ಕೃಷ್ಣ ಶಾಸ್ತ್ರಿಗಳ ಕಥಾಮೃತ ದಲ್ಲಿ ಪಂಚತಂತ್ರದ ಕಥೆಗಳು ಬಂದಿವೆ. ಇಂಗ್ಲಿಷ್, ಬಂಗಾಳಿ ಮತ್ತು ಮರಾಠಿಗಳ ಅನುವಾದಗಳು ಪಂಜೆ ಮಂಗೇಶರಾಯರು ಎಸ್. ಕಾಮತರು, ಕೆರೂರು ವಾಸುದೇವಾಚಾರ್ಯರಿಂದ ಅನುವಾದಿತ ವಾಗಿವೆ. ಹಳಗನ್ನಡದ ಕಥೆಗಳ ಹೊಸ ರೂಪಾಂತರವನ್ನು ಜಿ.ಪಿ.ರಾಜರತ್ನಂ, ಎಲ್. ಗುಂಡಪ್ಪ, ತ.ಸು. ಶಾಮರಾಯ, ಬಿ. ಶಂಕರಭಟ್ಟ, ಪೂಜಾರಿ ಮೊದಲಾದವರು ಹೊಸಗನ್ನಡಕ್ಕೆ ತಂದು ಬಹಳ ಉಪಕಾರಮಾಡಿದ್ದರೆ.

ಸಣ್ಣಕತೆಗಳನ್ನು ಮೊದಲು ಬರೆದ ಕತೆಗಾರರೆಂದರೆ ಕೆರೂರು ವಾಸು ದೇವಾಚಾರ್ಯ, ಪಂಜೆ ಮಂಗೇಶರಾಯರು, ಎಂ. ಎಸ್. ಕಾಮತ. ಆನಂದ ಕಂದ ಮೊದಲಾದವರುಗಳು ಆದ್ಯರೆಂದು ಹೇಳಬಹುದು. ಇವರು ಸಣ್ಣಕತೆಗಳ ಆಚಾರ್ಯಪುರುಷರೆಂದು ಹೇಳಬಹುದು. ಇವರು ಸಣ್ಣಕತೆಗಳ ರಚನೆಯಲ್ಲಿ ಪ್ರಮುಖರು. ಇವರು ಸಣ್ಣಕತೆಗಳ ಪುರೋಭಿವೃಧಿಗೆ ಮೂಲಪುರುಷರಾಗಿ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಇದು ಹೇಗಾದರೂ ಇರಲಿ, ಮಾಸ್ತಿಯವರಿಂದ ಸಣ್ಣ ಕತೆಗಳ ಸಾಹಿತ್ಯದ ಸ್ಪಷ್ಟಮಾರ್ಗ ರಚನೆಯಾಯಿತ್ಂದು ಹೇಳಬಹುದು. 1919ರ ಪ್ರಬುದ್ಧ ಕಣರ್ಾಟಕ ಪತ್ರಿಕೆಯಲ್ಲಿ ಶ್ರೀನಿವಾಸರ ಬಾದಷಹನ ದಂಡನೆ ರಂಗಪ್ಪನ ಮದುವೆ ಇವುಗಳು ಅಚ್ಚಾದವು. ಅ.ನ.ಕೃಷ್ಣರಾಯರ 'ಕಾಮನಬಿಲ್ಲು' ಅನಂತರ ಆನಂದಕಂದ, ದೇವುದು, ಕಾರಂತರು, ಗೊರೂರು, ಕುವೆಂಪು, ಬೇಂದ್ರೆ, ಮುಗಳಿ, ಗೌರಮ್ಮ, ಕೃಷ್ಣಕುಮಾರ್, ಗೋಪಾಲ ಕೃಷ್ಣರಾವ್ ಮೊದಲಾದವರು ಕತೆಗಳನ್ನು ಬರೆದು ಪ್ರಕಟಿಸಿದರು. ಹೀಗೆ ಅತಿವೇಗದಿಂದ ಬೆಳೆಯುತ್ತಾ ಬಂದ ಸಣ್ಣಕತೆಗಳು ಈಗ ಅಭಿವೃದ್ಧಿ ಹೊಂದಿ ವಿಪುಲವಾಗಿ ಬೆಳೆದು ಸಾಹಿತ್ಯದಲ್ಲಿ ತಮ್ಮ ಕೀತರ್ಿ ಪತಾಕೆಯನ್ನು ಹಾರಿಸಿವೆ. ಗೊರೂರು ರಾಮಸ್ವಾಮಿ ಅಯ್ಯಂಗಾರರು ಹೊಸಗನ್ನಡದ ಸ್ವತಂತ್ರ ಕತೆಗಳನ್ನು ಬರೆದು ಲಲಿತಸಾಹಿತ್ಯದ ಹಿರಿಮೆಯನ್ನು ಹೆಚ್ಚಿಸಿದರು. ಈ ಸಣ್ಣಕತೆಗಳು ಗದ್ಯಸಾಹಿತ್ಯ ವೃಕ್ಷದ ಶಾಖೆಯಾಗಿ ಗದ್ಯ ಸಾಹಿತ್ಯದ ಹೆಚ್ಚಳಕ್ಕೆ ಮೂಲಕಾರಣವಾಗಿದೆ,

ಹೀಗೆ ಕನ್ನಡದಲ್ಲಿ ಸಣ್ಣಕತೆಗಳ ಪ್ರಕಾರ ಉತ್ತಮವಾಗಿ ಬೆಳೆಯಲು ಮೊದಲು ಹೊನ್ನರು ಮಾಡಿದವರು ಮಾಸ್ತಿಯವರು ಎನ್ನಬಹುದು. ಇವರ ಜೊತೆಯಲ್ಲಿ ದುಡಿದವರಲ್ಲಿ ಕುವೆಂಪು ಒಬ್ಬರು. ಸಣ್ಣಕತೆಗಳು ಬೀಜಾಂಕುರ ದಲಿದ್ದಗಲೇ ನೀರೆರೆದು ಪೋಷಿಸಿದವರಲ್ಲಿ ಕುವೆಂಪುರವರು ಮುಖ್ಯರು. ಅವರ ಸನ್ಯಾಸಿ ಮತ್ತು ಇತರ ಕತೆಗಳು, ನನ್ನ ದೇವರು ಮತ್ತು ಇತರ ಕತೆಗಳು ಉತ್ತಮ ಕತೆಗಳಿಗೆ ನಿದರ್ಶಗವಾಗಿದೆ. ಮಲೆನಾಡಿನ ಚಿತ್ರಗಳು ಕಾಣಬಹುದು... ಉದಾ: ಪುಟ್ಟಾಚಾರಿಯ ಕಾಡುಕೋಳಿ ಹಾಗೂ ರಾಮರಾವಣ ಯುದ್ಧಗಳಲ್ಲಿನ ಬರವಣಿಗೆಯಿಂದ ಕುವೆಂಪುರವರು ಉತ್ತಮ ಕತೆಗಾರಎಂದು ಹೇಳಬಹುದು. ಅವರ ದೆವ್ವದ ಕಾಟ ಎಂಬ ಕತೆಯು ಮೊದಲಿನಿಂದ ಕೊನೆಯವರೆಗೂ ಕುತೂಹಲವನ್ನು ಕೆರಳಿಸುವುದಾಗಿದೆ. ಧನ್ವಂತರಿ ಚಿಕಿತ್ಸೆ ಎಂಬ ಕತೆಯು ಮನೋವೈಜ್ಞಾನಿಕ ತತ್ವಗಳನ್ನು

ಪ್ರತಿಬಿಂಬಿಸುತ್ತದೆ. ಗಂಟು ಅಥವಾ ಗುಪ್ತಧನ ಎಂಬ ಕತೆಯು ಹಳ್ಳಿಯ ಜನರ ಮೂಢನಂಬಿಕೆಗಳನ್ನು ನಿದಶರ್ಿಸುತ್ತದೆ. 'ಈಶ್ವರನೂ ನಕ್ಕಿರಬೇಕು' ಇತ್ಯಾದಿ ಕತೆಗಳು ಸಾಹಿತ್ಯಾಭಿವೃದ್ಧಿಗೆ ಆಸರೆಯಾಗಿದೆ ಕುವೆಂಪುರವರಿಗೆ ಉತ್ತಮ ಕತೆಗಾರನಿಗಿರಬೇಕಾದ ಸಾಸಿವೆಯಲ್ಲಿ ಸಮುದ್ರ ದರ್ಶನ ಮಾಡಿಸುವ ಕಲೆ ಸಿದ್ಧಿಸಿದೆ. ಹೀಗೆ ಇನ್ನು ಅನೇಕ ಆಧುನಿಕ ಕತೆಗಾರರು ಸಣ್ಣಕತೆಗಳ ಪುರೋಭಿವೃದ್ಧಿಗೆ ದುಡಿದಿದ್ದಾರೆ.

ಸಣ್ಣಕತೆಗಳು ಸ್ವಾಭಾವಿಕತೆಗೆ ಭಂಗಬರದಂತೆ ಅರೆಕ್ಷಣದಲ್ಲಿ ರಚಿಸಿದ ತಾಜ್ ಮಹಲ್ ಎಂದು ಆ ನ ಕೃ ರವರು ಅಭಿಪ್ರಾಯಪಟ್ಟಿದ್ದರೆ. ಸಣ್ಣಕತೆಗಳು ನಿಸ್ಸಂದೇಹವಾಗಿ ಲಂಗತೊಟ್ಟ ದೊರೆಸಾನಿ ಎಂದು ಎಸ್.ವಿ. ರಂಗಣ್ಣನವರು ಅಭಿಪ್ರಾಯಪಟ್ಟಿದ್ದಾರೆ. ಸಣ್ಣಕತೆಗಳು ಇಂಗ್ಲಿಷ್ ಭಾಷೆಯ ಅನುಕರಣವಲ್ಲ ಅನುಕೂಲತೆ ಎಂದು ದ.ರಾ.ಬೇಂದ್ರೆಯವರು ಹೇಳಿದ್ದರೆ.

**-; ಆಧಾರ ಗ್ರಂಥಗಳು ;-**

- ಕನ್ನಡ ಸಾಹಿತ್ಯ ಚರಿತ್ರೆಯ ಸಂಕ್ಷಿಪ್ತ ಪರಿಚಯ
- ಕನ್ನಡ ಸಾಹಿತ್ಯ ಕೋಶ - ರಾಜಪ್ಪ ದಳವಾಯಿ
- ಕನರ್ಾಟಕ ಸಂಗಾತಿ - ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು